1. ಚಿಕ್ಕಮಗಳೂರು	7	12
2. ಕಡೂರು	1	22
3. ತರೀಕೆರೆ	–	3
ಒಟ್ಟು	8	37

ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಗಿತಗೊಂಡಿರುವುದು

(1989): ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯದಲ್ಲಿರುವ ಬಹುಪಾಲು ಎಲ್ಲಾ ಪರಿಶಿಷ್ಟ ಜಾತಿಯ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಗಿತಗೊಂಡಿರುವುದು ನಿಜವೇ;

ಆ. ಇದಕ್ಕೆ ಕಾರಣಗಳೇನು;

ಇ. ಈ ಸಂಘಗಳನ್ನು ಕೆಲಸ ಮಾಡುವಂತೆ ಮಾಡುವುದು ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಇಲ್ಲಾ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವರ್ಗ ಮತ್ತು ನೇಮಕಾತಿ ನಿಯಮ

(2070): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವರ್ಗ ಮತ್ತು ನೇಮಕಾತಿ (ಎಲ್ಲಾ ನೇಮಕಾತಿ ಮತ್ತು ಹುದ್ದೆಗಳಿಗೆ) ನಿಯಮಾವಳಿ ರೂಪಿಸಲಾಗಿದೆಯೇ (ವರ್ಗ ಮತ್ತು ನೇಮಕಾತಿ ನಿಯಮಾವಳಿಯ ಪ್ರತಿ ಒದಗಿಸುವುದು);

ಆ. ಹಾಗಿದ್ದಲ್ಲಿ, ಅದನ್ನು ಯಾವಾಗ ಜಾರಿಗೆ ಕೊಡಲಾಯಿತು;

ಇ. ಆಯ್ಕೆ ಅಥವಾ ನೇಮಕಾತಿ ಸಮಿತಿಯಲ್ಲಿ **ಪರಿಶಿಷ್ಟ** ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಾತಿನಿಧ್ಯತೆಗೆ ಅವರ ಅವಕಾಶ ಕಲ್ಪಿಸಲಾಗಿದೆಯೇ;

ಈ. ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಸಿಬ್ಬಂದಿ ವರ್ಗದ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾತ್ರ **ವರ್ಗ** ಮತ್ತು ನೇಮಕಾತಿ ಯಮಾವಳಿಗಳನ್ನು ರೂಪಿಸಲಾಗಿದೆ.